CW.15 PW.2

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1693/2022

| | |
|---|---|
| ಸಾಕ್ಷಿದಾರರ ಹೆಸರು | ಕೃಷ್ಣ ಟಿ ಟಿ |
| ತಂದೆಯ ಹೆಸರು | ತಿಮ್ಮೇಗೌಡ |
| ವಯಸ್ಸು | 54 ವರ್ಷ |
| ವೃತ್ತಿ | ಪಿ ಐ, ಕೇಂದ್ರ ಕಚೇರಿ, ಬೆಂಗಳೂರು |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 07.04.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 26.11.2020 ರಿಂದ 05.08.2022 ರವರೆಗೂ ವೃತ್ತ ನಿರೀಕ್ಷಕರು, ಕನಕಪುರ ಇಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿದ್ದು ಸಂಚಾರಿ ಠಾಣೆಯು ನನ್ನ ವ್ಯಾಪ್ತಿಗೆ ಬರುತ್ತಿತ್ತು.

ಆರೋಪಿಯನ್ನು ನಾನು ನೋಡಿರುತ್ತೇನೆ. ಈ ದಿನ ಹಾಜರಿರುತ್ತಾರೆ.

ಸದರಿ ಪ್ರಕರಣದ ಕಡತವನ್ನು ದಿಃ15.02.2021 ರಂದು ಚಾಸಾ-14 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ವಾಹನದ ಮಾಲೀಕರು ಹಾಗೂ ಪ್ರಸ್ತುತ ಪ್ರಕರಣದ ಆರೋಪಿಯು ಠಾಣೆಗೆ ಹಾಜರಾದ ಮೇರೆಗೆ ದಸ್ತಗಿರಿ ನಿಯಾಮಾವಳಿಯನ್ನು ಪಾಲಿಸಿ ಜಾಮಿನಿನ ಮೇಲೆ ಬಿಡುಗೆ ಮಾಡಲಾಯಿತು.

ದಿಃ06.04.2021 ರಂದು ಚಾಸಾ-1 ರವರು ಹಾಜರು ಪಡಿಸಿದ ಪಿ ಎಂ ವರದಿ ಹಾಗೂ ಶವ ತನಿಖಾ ವೇಳೆ ಅಮಾನತು ಪಡಿಸಿಕೊಂಡ ವಸ್ತುಗಳನ್ನು ಹಾಜರು ಪಡಿಸಿದ್ದು ಸದರಿ ವಸ್ತುಗಳನ್ನು ನಮ್ಮ ಠಾಣೆಯ ಪಿ ಎಫ್ ನಂ.21/21 ರಂತೆ ದಾಖಲು ಮಾಡಿ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ.

ದಿಃ16.04.2021 ರಂದು ಸದರಿ ಪಿ ಎಫ್ ನಂ.21/21 ರಲ್ಲಿರುವ airticle no.1 ಮತ್ತು 2 ನ್ನು ಪರೀಕ್ಷೆಯ ಸಲುವಾಗಿ ವಿಕ್ಟೋರಿಯಾ ಪಾಥೋಲಾಜಿ ವಿಭಾಗಕ್ಕೆ ಕಳುಹಿಸಲಾಯಿತು. ದಿಃ25.04.2021 ರಂದು ಚಾಸಾ-1 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ರೀತಿ ದಿಃ21.05.2021 ರಂದು ಚಾಸಾ-9 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 08.05.2021 ರಂದು ಚಾಸಾ-10 ರವರಿಂದ ಐಎಂ ವಿ ವರದಿ ಪಡೆದುಕೊಂಡಿರುತ್ತೇನೆ. ದಿಃ21.05.2022 ರಂದು ಚಾಸಾ-12 ರವರಿಂದ ಪಾಥೋಲಾಜಿ ವರದಿ ಪಡೆದಿರುತ್ತೇನೆ. ದಿಃ26.05.2022 ರಂದು ಸದರಿ ಪಾಥೋಲಾಜಿ ಆಧಾರದ ಮೇರೆಗೆ ಚಾಸಾ-13 ರವರಿಗೆ ಅಂತಿಮ ಅಭಿಪ್ರಾಯದ ವರದಿ ಪಡೆದಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಮೇಲೆ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಪಿಎಂ ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಐಎಂವಿ ವರದಿಯನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪಾಥೋಲಾಜಿ ವರದಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಚಾಸಾ-2 ಮತ್ತು 9 ರವರು ನಾನು ಹೇಳಿದಂತೆ ನನ್ನ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಐಎಂವಿ ವರದಿಯನ್ನು ಸಹ ನಾನು ಚಾಸಾ-10 ರವರಿಂದ ನಮಗೆ ಬೇಕಾದ ರೀತಿಯಲ್ಲಿ ತಯಾರು ಮಾಡಿಸಿ ಪಡೆದಿರುತ್ತೇನೆಂದರೆ ಸರಿಯಲ್ಲ. ಸದರಿ ನಿಪಿ-9 ರ ದಾಖಲೆಗೂ ಪ್ರಸ್ತುತ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರಕರಣದ ಮೃತನು ತನ್ನ ವಯೋ ಸಹಜ ಖಾಯಿಲೆಯಿಂದ ಮೃತಪಟ್ಟಿದ್ದು ಅಪಘಾತದಿಂದ ಅಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಈ ರೀತಿ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿಯ ತಪ್ಪಿ ನಿಂದ ಸದರಿ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**